ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-1 (ಹಣಮಂತ)
ಪಿ.ಎ ಹೋಲ್ಡರ್ ಆಫ್ ಪಿ.ಡಬ್ಲ್ಯೂ-1

ದಿನಾಂಕ: 23-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಎಚ್.ಎನ್. ಪ್ರತಿವಾದಿ 4, 5ಎ, 5ಬಿ ಮತ್ತು 6 ರವರ ಪರ ವಕೀಲರಿಂದಃ**

ನಾನು 4ನೇ ತರಗತಿವರೆಗು ಓದಿದ್ದೇನೆ. 1ನೇ ಪ್ರತಿವಾದಿ ನನ್ನ ಸ್ವಂತ ಚಿಕ್ಕಪ್ಪ ಎಂದರೆ ಸರಿ. ವಾದಿ ಅಮರ 1ನೇ ಪ್ರತಿವಾದಿಯ ಮಗ. ನಾನು ಕಳ್ಳಿಗುದ್ದಿಯಲ್ಲಿ ವಾಸ ಇದ್ದೇನೆ. ಕಳ್ಳಿಗುದ್ದಿಯಲ್ಲಿರುವ ಮನೆಗಳಲ್ಲಿ ಯಾರು ಯಾರು ಪಾಲಿಗೆ ಎಷ್ಟು ಮನೆಗಳು ಬಂದಿವೆ ಎಂದರೆ ಸಾಕ್ಷಿದಾರರು ಒಂದು ಮನೆಯಲ್ಲಿ ಸತ್ತೆಪ್ಪ ಮಾವಿನಗಿಡದ, ರಾಮಪ್ಪ ಮಾವಿನಗಿಡದ, ಬೀರಪ್ಪ ಮಾವಿನಗಿಡದ, ಫಕೀರಪ್ಪ ಮಾವಿನಗಿಡದ ಇವರಿಗೆ ಪಾಲು ಮಾಡಲಾಗಿದೆ ಎಂದು ಹೇಳುತ್ತಾರೆ.

2. ವಾದಿ ತಮಗೆ ಹೊಲ ಬೇಕು ಎಂದು ಹೇಳಿ ಈ ದಾವೆ ಮಾಡಿದ್ದಾರೆ. ಈಗಾಗಲೇ ಈ ದಾವೆಯಲ್ಲಿ ನಾನು ವಾದಿ ಪರ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ವಾದಿಗೆ ಹೊಲ ಕೊಡಿಸಬೇಕೆಂದು ಹೇಳಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಇದನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿಲ್ಲ. ಕಳ್ಳಿಗುದ್ದಿಯಲ್ಲಿ ಒಂದು ಮನೆಯಲ್ಲಿ ಈ ಮೇಲೆ ಹೇಳಿದ ನಾಲ್ಕು ಜನರಿಗೆ ಪಾಲು ಮಾಡಿರುವ ಮನೆ ಈ ದಾವೆಯಲ್ಲಿ ಸೇರಿದ್ದಾರೋ ಇಲ್ಲವೊ ಎಂದು ನಾನು ತಿಳಿದುಕೊಂಡಿಲ್ಲ. ಸದರಿ

ಮನೆಯನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನಾನು ತಿಳಿದುಕೊಂಡಿಲ್ಲ.

3. ಈ ಮೊದಲು ಈ ದಾವೆಯನ್ನು 03ಎ-12ಗು ಜಮೀನಿನ ಮೇಲೆ ಸಲ್ಲಿಸಿದ್ದರು ಅದರ ಸರ್ವೆ ನಂ.100/2/1 ಇರುತ್ತದೆ. ಸದರಿ ಸರ್ವೆ ನಂ.100/2/1ರ ದಾಖಲಾತಿಗಳನ್ನು ನಾನು 2020ರಲ್ಲಿ ನೋಡಿದ್ದೇನೆ. ಮುಂದುವರೆದು 2020ರಲ್ಲಿ ತಾವು ಯಾವುದೇ ದಾಖಲೆ ನೋಡಿಲ್ಲ ಎಂದು ಹೇಳುತ್ತಾರೆ. ವಾದಿ ಹಾಗೂ ಅವರ ತಂದೆ ರಾಮಪ್ಪ ವಿದ್ಯಾವಂತರು, ಅವರಿಗೆಲ್ಲ ತಿಳುವಳಿಕೆ ಇದೆ ಎಂದರೆ ಸರಿ.

4. 1ನೇ ಪ್ರತಿವಾದಿ ರಾಮಪ್ಪ ಇವರ ಹೆಸರಿನಲ್ಲಿ ಸರ್ವೆ ನಂ.100/2/3 ರಲ್ಲಿ 03ಎ-12ಗು ಜಮೀನು ಇದೆ. ಸರ್ವೆ ನಂ.99/2/3ರಲ್ಲಿ 03ಎ-02ಗು ಜಮೀನು ಇದೆ. ಸರ್ವೆ ನಂ.121ರಲ್ಲಿ 02ಎ-04ಗು ಜಮೀನು ಇದೆ. ಸದರಿ ಜಮೀನುಗಳ ಚಕ್ಕಬಂದಿ ನನಗೆ ಗೊತ್ತಿದೆ.

5. ಸರ್ವೆ ನಂ.100/2/3 ರಲ್ಲಿ 03ಎ-12ಗು ರ ಚಕ್ಕಬಂದಿ ಪೂರ್ವಕ್ಕೆ- ಹಣಮಂತ ಮಾವಿನಗಿಡದ, ಪಶ್ಚಿಮಕ್ಕೆ- ಬೀರಪ್ಪ ಮಾವಿನಗಿಡದ, ದಕ್ಷಿಣಕ್ಕೆ- ಹಳ್ಳ, ಉತ್ತರಕ್ಕೆ- ರಾಮಪ್ಪ ಮಾವಿನಗಿಡದ ಇವರ ಜಮೀನು.

6. ಸರ್ವೆ ನಂ.99/2/3 ರಲ್ಲಿ 03ಎ-02ಗು ರ ಚಕ್ಕಬಂದಿ ಪೂರ್ವಕ್ಕೆ- ಹಣಮಂತ ಮಾವಿನಗಿಡದ, ಪಶ್ಚಿಮಕ್ಕೆ- ಬೀರಪ್ಪ ಮಾವಿನಗಿಡದ, ದಕ್ಷಿಣಕ್ಕೆ- ರಾಮಪ್ಪ ಮಾವಿನಗಿಡದ ಇವರ ಜಮೀನು, ಉತ್ತರಕ್ಕೆ- ಕಾಲುವೆ.

7. ಸರ್ವೆ ನಂ.121 ರಲ್ಲಿ 02ಎ-04ಗು ರ ಚಕ್ಕಬಂದಿ ಪೂರ್ವಕ್ಕೆ- ರಸ್ತೆ, ಪಶ್ಚಿಮಕ್ಕೆ- ಮುತ್ತೆಪ್ಪ ಗುತ್ತಿಗೋಳಿ ಇವರ ಜಮೀನು, ದಕ್ಷಿಣಕ್ಕೆ- ಗಂಗವ್ವ ಮಾವಿನಗಿಡದ ಇವರ ಜಮೀನು, ಉತ್ತರಕ್ಕೆ- ಚಿದಾನಂದ ಮಾವಿನಗಿಡದ ಇವರ ಜಮೀನು.

8. ಗೋಕಾಕನಲ್ಲಿ 1ನೇ ಎದುರುದಾರರ ಹೆಸರಿನಲ್ಲಿರುವ ಆರ್.ಸಿ.ಸಿ ಮನೆ ನಂಬರ ಮತ್ತು ಚಕ್ಕಬಂದಿ ನನಗೆ ಗೊತ್ತಿಲ್ಲ. ಸದರಿ ಅರ್.ಸಿ.ಸಿ ಮನೆಯಲ್ಲಿಯೇ ವಾದಿ ಮತ್ತು ಪ್ರತಿವಾದಿಯರು ವಾಸ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಕಳ್ಳಿಗುದ್ದಿಯಲ್ಲಿಯ ಸರ್ವೆ ನಂ.99/2/3ರಲ್ಲಿರುವ ಹಂಚಿನ ಮನೆಯಲ್ಲಿ ವಾಸ ಇದ್ದಾರೆ. ವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಸರ್ವೆ ನಂ.99/2/3 ರ ಹಂಚಿನ ಮನೆಯಲ್ಲಿ ವಾಸ ಇದ್ದಾರೆ ಎಂದು ಬರೆದಿಲ್ಲ. ವಾದಿ ಸರ್ವೆ ನಂ.99/2/3 ರ ಹಂಚಿನ ಮನೆಯಲ್ಲಿ ವಾಸ ಇದ್ದಾರೆ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ.

9. 1ನೇ ಪ್ರತಿವಾದಿ ಯಾವ ವರ್ಷದಲ್ಲಿ ನೌಕರಿಗೆ ಸೇರಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನಾಗಲಿ ವಾದಿಯಾಗಲಿ 1ನೇ ಪ್ರತಿವಾದಿ ಯಾವ ವರ್ಷದಲ್ಲಿ ನೌಕರಿಗೆ ಸೇರಿದ್ದಾರೆಂದು ದಾಖಲೆ ಪಡೆಯಲು ಯಾವುದೇ ಪ್ರಾಧಿಕಾರದ ಮುಂದೆ ಅರ್ಜಿ ಕೊಟ್ಟಿಲ್ಲ. 1ನೇ ಪ್ರತಿವಾದಿಯ ನೌಕರಿಯ ವಿಚಾರವಾಗಿ ದಾಖಲೆಗಳನ್ನು ಪಡೆಯಲು ನಾನಾಗಲಿ ವಾದಿಯಾಗಲಿ ಯಾವುದೇ ಅರ್ಜಿ ಕೊಟ್ಟಿಲ್ಲ. 2022ರಲ್ಲಿ ವಾದಿ ತಹಸೀಲ್ದಾರರ ಕಚೇರಿಯಲ್ಲಿ 1ನೇ ಪ್ರತಿವಾದಿಯ ನೌಕರಿಯ ದಾಖಲೆಗಳನ್ನು ಪಡೆಯಲು ಅರ್ಜಿ ಕೊಟ್ಟಿರುತ್ತಾರೆ. ಆ ಅರ್ಜಿಯ ಮೇಲೆ ಏನು ಆಯಿತು ಎಂದು ನನಗೆ ಗೊತ್ತಿಲ್ಲ. 2022ರಲ್ಲಿ ವಾದಿ ತಹಸೀಲ್ದಾರರ ಕಚೇರಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಈ ದಾವೆಯಲ್ಲಿ ಹಾಜರ ಪಡಿಸಿದ್ದಾರೋ ಇಲ್ಲವೊ ಎಂದು ನಾನು ತಿಳಿದುಕೊಂಡಿಲ್ಲ. ಅದೇ ರೀತಿ ಆ ಅರ್ಜಿಯಲ್ಲಿ ಏನೇನು ಬರೆದಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಅದೇ ರೀತಿ ವಾದಿ ಯಾವ ಯಾವ ದಾಖಲೆಗಳನ್ನು ತೆಗೆದುಕೊಂಡಿದ್ದರು ಸಹ ನನಗೆ ಗೊತ್ತಿಲ್ಲ.

10. ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ಯಾವ ದಾಖಲೆ ಮಾಡಿಕೊಂಡು ವಾಟ್ನಿ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ನನ್ನ ತಂದೆಗೆ ಯಾವ ದಾಖಲೆಗಳ ಆಧಾರದ ಮೇಲೆ ತಾವು ಹಾಗೂ ಅವರ ತಮ್ಮಂದಿಯರು ವಾಟ್ನಿ ಮಾಡಿಕೊಂಡಿದ್ದೀರಾ ಎಂದು ಕೇಳಿಲ್ಲ. ವಾದಿ ಬರೆಯಿಸಿದ್ದರ ಆಧಾರದ ಮೇಲೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಹಾಗೂ ಅವರ ತಮ್ಮಂದಿಯರ ನಡುವೆ ವಾಟ್ನಿ ಆಗಿದೆ ಎಂದು ಬರೆಯಿಸಿದ್ದೇನೆ. ನನ್ನ ಮುಖ್ಯ

ವಿಚಾರಣೆ ಪ್ರಮಾಣ ಪತ್ರವನ್ನು ವಾದಿ ಬರೆಯಿಸಿದ್ದು ಅದಕ್ಕೆ ವಾದಿ ಸಹಿ ಮಾಡಿ ಎಂದಿದ್ದಕ್ಕೆ ನಾನು ಸಹಿ ಮಾಡಿದ್ದೇನೆ.

11. 1ನೇ ಪ್ರತಿವಾದಿಗೆ ಎಷ್ಟು ಸಂಬಳ ಇತ್ತು ಎಂದು ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ವಾದಿಗೆ ಸರಕಾರದಿಂದ ವರ್ಷಕ್ಕೆ ರೂ.40,000/- ಸ್ಕಾಲರ್ಶಿಪ್ ಬರುತ್ತಿತ್ತು ಎಂದು ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರ ಮಾಡಿಲ್ಲ. ವಾದಿಗೆ ಸ್ಕಾಲರ್ಶಿಪ್ ಬರುವುದನ್ನು ನಾನು 2009ರಲ್ಲಿ ನೋಡಿದ್ದೇನೆ. ವಾದಿಯ ಸ್ಕಾಲರ್ಶಿಪ್ ಬ್ಯಾಂಕನಲ್ಲಿ ಜಮಾ ಆಗುತ್ತಿತ್ತು ಯಾವ ಬ್ಯಾಂಕನಲ್ಲಿ ಜಮಾ ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ವಾದಿಯ ಸ್ಕಾಲರ್ಶಿಪ್ ಜಮಾ ಆದ ಬಗ್ಗೆ ಬ್ಯಾಂಕ ದಾಖಲೆಗಳನ್ನು ನಾನು ನೋಡಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಷಯ ಗೊತ್ತು ಇರದೇ ಇದ್ದರೂ ಸಹ ಏನಾದರು ಮಾಡಿ ಆಸ್ತಿ ಹೊಡೆಯಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. 1ನೇ ಪ್ರತಿವಾದಿ ತಮ್ಮ ಸಂಬಳದ ಆದಾಯದಿಂದ ವಾದಿಗೆ ಶಾಲೆ ಕಲಿಸಿರುತ್ತಾರೆ ಎಂದು ಹೇಳಿ ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ. 1ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಬೆಳೆದ ಕಬ್ಬನ್ನು ತಮ್ಮ ಹೆಸರಿನಲ್ಲಿ ಸಕ್ಕರೆ ಕಾರಖಾನೆಗೆ ಕಳುಹಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿಲ್ಲ. 1ನೇ ಪ್ರತಿವಾದಿಯ ಹಣಕಾಸಿನ ಸ್ಥಿತಿ ಚೆನ್ನಾಗಿತ್ತು ಎಂದು ತೋರಿಸಲು ಯಾವುದೇ

ದಾಖಲೆಗಳನ್ನು ಹಾಜರ ಮಾಡಿಲ್ಲ. 1ನೇ ಪ್ರತಿವಾದಿಗೆ ದುಶ್ಚಟಗಳು ಇದ್ದ ಬಗ್ಗೆ ಯಾವುದೇ ದೂರು ದಾಖಲಿಸಿಲ್ಲ. ವಾದಿ ಮತ್ತು ಪ್ರತಿವಾದಿ 1 ರಿಂದ 3 ಬೇರೆ ಬೇರೆ ವಾಸಿಸುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ಈ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯು ಸಹ ಹೇಳಿಲ್ಲ.

13. 1ನೇ ಪ್ರತಿವಾದಿ ಗೋಕಾಕನಲ್ಲಿ ತನ್ನ ಸ್ವಂತ ದುಡ್ಡಿನಿಂದ ಆರ್.ಸಿ.ಸಿ ಕಟ್ಟಡ ಕಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. 1ನೇ ಪ್ರತಿವಾದಿ ಮನೆ ಕಟ್ಟಿಸಲು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡಿದ್ದಾರು, ಆ ಸಾಲ ತೀರಿಸುವುದಕ್ಕಾಗಿ 1ನೇ ಪ್ರತಿವಾದಿ ಸರ್ವೆ ನಂ.100/2/2 ಮತ್ತು 100/2/5 ಸಂಪೂರ್ಣ ಜಮೀನನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ವಾದಿ ಕಬ್ಜೆಯಲ್ಲಿ ಇದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ.

14. ನಿಪಿ-1ರ ಪ್ರಕಾರ 1ನೇ ಪ್ರತಿವಾದಿ ಸರ್ವೆ ನಂ.100/2/2ನ್ನು ದಿನಾಂಕ 27/03/2014 ರಂದು 4 ಮತ್ತು 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 27/03/2014 ರಿಂದ 4 ಮತ್ತು 5ನೇ ಪ್ರತಿವಾದಿಯರು ಸದರಿ ಆಸ್ತಿಯ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ

ಆಸ್ತಿಯಲ್ಲಿ ವಾದಿ ಕಬ್ಜೆಯಲ್ಲಿ ಇದ್ದಾರೆ ಎಂದು ನನ್ನ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

15. ನಿಪಿ-6ರಲ್ಲಿ ಸರ್ವೆ ನಂ.100 ಮತ್ತು 99 ಇದ್ದರೂ ಸಹ ಸರ್ವೆ ನಂ.99ನ್ನು ಬಿಟ್ಟು ಕೇವಲ ಸರ್ವೆ ನಂ100 ರ ಮೇಲೆ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ನಮಗೆ ತಾವು ಸರ್ವೆ ನಂ.100ರ ಮೇಲೆ ದಾವೆ ಮಾಡಿದ್ದಾಗಿ ಹೇಳಿರುತ್ತಾರೆ. ಜಮೀನುಗಳ ಬೆಲೆ ಜಾಸ್ತಿಯಾಗಿದ್ದರಿಂದ ಪ್ರತಿವಾದಿ 4 ಮತ್ತು 5 ರವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸರ್ವೆ ನಂ.100ರ ಮೇಲೆ ಮಾತ್ರ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

16. 1ನೇ ಪ್ರತಿವಾದಿ ನಮಗೆ ಅವರ ಹಿರಿಯರಿಂದ ಬಂದ ಆಸ್ತಿಗಳ ಆದಾಯದಿಂದ ಹಾಗೂ ಸರ್ವೆ ನಂ.100/2/3ನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿದ್ದರಿಂದ ಬಂದ ಹಣದಿಂದ ಗೋಕಾಕನಲ್ಲಿ ನಿವೇಶನ ಖರೀದಿ ಮಾಡಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

17. 1ನೇ ಪ್ರತಿವಾದಿ ಹಿರಿತನ ಮಾಡಲು ಹೋಗಿರುವುದಿಲ್ಲ. ವಾದಿ, ಪ್ರತಿವಾದಿ 1 ರಿಂದ 3 ಸೇರಿಕೊಂಡು ನನ್ನ ಹೆಸರಿಗೆ ಒಂದು ಸುಳ್ಳು ಅಧಿಕಾರ ಪತ್ರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-1 (ಹಣಮಂತ)
ಪಿ.ಎ ಹೋಲ್ಡರ್ ಆಫ್ ಪಿ.ಡಬ್ಲ್ಯೂ-1

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ